

ಡಿ. ಸತ್ಯಪ್ರಕಾಶ್ ನಿರ್ದೇಶನದ ‘ಒಂದಲ್ಲಾ ಎರಡಲ್ಲಾ’, ಕನ್ನಡದ ಹೊಸ ತಲೆಮಾರಿನ ಪ್ರಯೋಗಶೀಲತೆಯ ಹಂಬಲವನ್ನು ಸಮರ್ಥವಾಗಿ ಪ್ರತಿಬಿಂಬಿಸುವ ಸಿನಿಮಾ. ಗಲ್ಲಾಪೆಟ್ಟಿಗೆಯಲ್ಲಿ ಸದ್ದುಮಾಡಲು ಸೋತ ಈ ಚಿತ್ರಕ್ಕೆ ಎರಡು ರಾಷ್ಟ್ರಪ್ರಶಸ್ತಿಗಳು ಬಂದಿವೆ. ಈ ಚಿತ್ರದಲ್ಲಿ ನಟಿಸಿದ್ದ ಪಿ.ವಿ. ರೋಹಿತ್ ಅತ್ಯುತ್ತಮ ಬಾಲನಟ ಪ್ರಶಸ್ತಿ ಪಡೆದುಕೊಂಡಿದ್ದರೆ, ಈ ಚಿತ್ರಕ್ಕೆ ರಾಷ್ಟ್ರೀಯ ಭಾವೈಕ್ಯತಾ ಪ್ರಶಸ್ತಿಯೂ ಸಂದಿದೆ.

> ನಮ್ಮ ಆರ್ಟ್ ಫಿಲ್ಮ್ ಡೈರೆಕ್ಟರ್‌ಗಳಿಗೆ ಮಹತ್ವಾಕಾಂಕ್ಷೆ ಇಲ್ಲ. ಅವರುಗಳು ಸವಾಲುಗಳಿಗೆ ಮುಖಾಮುಖಿ ಆಗೊಲ್ಲ. ಈ ಮಿತಿಗಳ ನಡುವೆಯೂ ‘ತಿಥಿ’ಯಂಥ ಸಾರ್ವಕಾಲಿಕ ಅತ್ಯುತ್ತಮ ಚಿತ್ರ ರೂಪುಗೊಂಡಿದ್ದನ್ನು ಗಮನಿಸಬೇಕು.
>
> -ಎಂ.ಕೆ. ರಾಘವೇಂದ್ರ

ಚಿತ್ರಗಳು ಮಾತ್ರವಲ್ಲ – ಕನ್ನಡದ ವ್ಯಾಪಾರಿ ಚಿತ್ರಗಳು ಕೂಡ ಹಳೆಯ ಚಿತ್ರಗಳೊಂದಿಗೆ ಸ್ಪರ್ಧಿಸುವಷ್ಟು ಶ್ರೀಮಂತವಲ್ಲ ಎನ್ನುವುದನ್ನು ಕನ್ನಡದ ಸಹೃದಯರೆಲ್ಲ ಬಲ್ಲರು.

ಚಿತ್ರದ ಗುಣಮಟ್ಟವನ್ನು ಅರಿಯಲಿಕ್ಕೆ ಹೊರಗಿನ ಚಿತ್ರಗಳೊಂದಿಗಿನ ಹೋಲಿಕೆಯ ಅಗತ್ಯವನ್ನು ನಿರ್ದೇಶಕ ಗಿರೀಶ ಕಾಸರವಳ್ಳಿ ಅವರು ಸಂದರ್ಶನವೊಂದರಲ್ಲಿ ಹೇಳಿರುವುದು ಹೀಗೆ: ‘ಹೊಸ ಪ್ರಯತ್ನಗಳು ನಮ್ಮಲ್ಲಿ ಕಡಿಮೆ. ಈಗ ಬರುತ್ತಿರುವ ಒಳ್ಳೆಯ ಚಿತ್ರಗಳು ಕೂಡ ನಮ್ಮ ಮಟ್ಟಿಗೆ ಉತ್ತಮ ಅಷ್ಟೇ. ಹೊರಗಿನ ಚಿತ್ರಗಳೊಂದಿಗೆ ಸ್ಪರ್ಧಿಸಿದಾಗ, ಹೋಲಿಸಿದಾಗ ನಮ್ಮ ಸಿನಿಮಾಗಳ ಮಿತಿ ತಿಳಿಯುತ್ತದೆ’. ಈ ಹಿನ್ನೆಲೆಯಲ್ಲಿ ನೆರೆಹೊರೆಯ ಚಿತ್ರಗಳನ್ನು ನೆನಪಿಸಿಕೊಂಡರೆ ಮೊದಲಿಗೆ ಗಮನಸೆಳೆಯುವುದು ಕೇರಳೀಯರು. ಎಂದಿನಂತೆ ಮಲಯಾಳಂ ಚಿತ್ರರಂಗ ಪ್ರಯೋಗಶೀಲತೆಯಲ್ಲಿ ಮುಂದು. ನಿಫಾ ವೈರಸ್ ಅನ್ನು ಸಿನಿಮಾಕ್ಕೆ ಅಳವಡಿಸುವಷ್ಟು ಪ್ರಯೋಗಶೀಲತೆ ಅವರದು. ವ್ಯಾಪಾರಿ ಮತ್ತು ಪ್ರಯೋಗಶೀಲ – ಎರಡೂ ಪ್ರಕಾರಗಳಲ್ಲಿ ಮಲಯಾಳಿಗಳದು ಹುಲುಸು ಬೆಳೆ. ಮರಾಠಿ, ಬೆಂಗಾಲಿಗಳು ಕೂಡ ತಣ್ಣಗೆ ಅರ್ಥಪೂರ್ಣ ಸಿನಿಮಾಗಳನ್ನು ರೂಪಿಸುತ್ತಿದ್ದಾರೆ. ತಮಿಳಿನಲ್ಲಿ ವ್ಯಾಪಾರಿ ನೆಲೆಗಟ್ಟಿನಲ್ಲಿಯೇ ಪ್ರಯೋಗಶೀಲ ಚಿತ್ರಗಳನ್ನು ರೂಪಿಸುವ ತಲೆಮಾರೊಂದು ರೂಪುಗೊಳ್ಳುತ್ತಿರುವಂತಿದೆ. ಸಶಕ್ತ ದಲಿತ ಕಥನಗಳು ಕೂಡ ಮುಖ್ಯವಾಹಿನಿ ಸಿನಿಮಾದ ಭಾಗವಾಗುತ್ತಿರುವುದು ತಮಿಳು ಚಿತ್ರರಂಗದ ವಿಶೇಷ. ಈ ಸೋದರ ಭಾಷೆಗಳ ಸಿನಿಮಾಗಳಿಗೆ ಹೋಲಿಸಿದರೆ ಕನ್ನಡದ ಚಿತ್ರಗಳು ಪೇಲವವಾಗಿ ಕಾಣಿಸುವುದು ಅಸಹಜವೇನೂ ಅಲ್ಲ.

ಇನ್ನು ಪ್ರಶಸ್ತಿ ಪುರಸ್ಕಾರಗಳ ವಿಷಯಕ್ಕೆ ಬರೋಣ. ಪ್ರಸಕ್ತ ವರ್ಷ ಕನ್ನಡಕ್ಕೆ ಹನ್ನೊಂದು ರಾಷ್ಟ್ರಪ್ರಶಸ್ತಿಗಳು ಸಂದಿರುವ ಹಿನ್ನೆಲೆಯಲ್ಲಿ



2018ರಲ್ಲಿ ತೆರೆಕಂಡ ಮಲಯಾಳಂ ಸಿನಿಮಾ ಇ. ಮಾ. ಯು. ಹಲವು ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರದರ್ಶನಕಂಡು ಮೆಚ್ಚುಗೆ ಪಡೆದಿದೆ. ಆದರೆ ರಾಷ್ಟ್ರಪ್ರಶಸ್ತಿಯ ನೀಡುವವರ ಕಣ್ಣಿಗೆ ಮಾತ್ರ ಈ ಚಿತ್ರ ಬಿದ್ದಿಲ್ಲ!